OCTOBER 06, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **‘ನಾನೂ ವಿಜ್ಞಾನಿ’ ಟೆಲಿಸ್ಕೋಪ್ ರಚನಾ ಕಮ್ಮಟ; ದೊಡ್ಡಬಳ್ಳಾಪುರದಲ್ಲಿ, 6ನೇ ದಿನಕ್ಕೆ ಪಾದಾರ್ಪಣೆ.**
- **ವೈದ್ಯರ ಸಲಹೆ ಪಡೆಯದೇ, 4 ವರ್ಷದೊಳಗಿನ ಮಕ್ಕಳಿಗೆ,ಕೆಮ್ಮಿನ ಔಷಧಿ ನೀಡದಂತೆ, ಆರೋಗ್ಯ ಇಲಾಖೆ, ಸ್ಪಷ್ಟ ಸೂಚನೆ.**
- **ತ್ಯಾಗ, ಸತ್ಯ ಮತ್ತು ಅಹಿಂಸೆಯ, ಶಾಶ್ವತ ಸಂಕೇತ, ಭಗವಾನ್ ಮಹಾವೀರ – ರಾಜ್ಯಪಾಲರ, ಅಭಿಮತ.**
- **‘ಫಿಟ್ ಇಂಡಿಯಾ ಸ್ವಚ್ಛತಾ ಫ್ರೀಡಂ ರನ್’; ‘ಸಂಡೇಸ್ ಆನ್ ಬೈಸಿಕಲ್ಸ್’ ಅಭಿಯಾನ.**

<><><>

**ಈಗ ವಾರ್ತೆಗಳ ವಿವರ**

<><><>

**ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತು, ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಹಾಗೂ ರಾಜ್ಯ ವಿಜ್ಞಾನ ಅಕಾದೆಮಿ ಸಹಯೋಗದಲ್ಲಿ, ಈ ತಿಂಗಳ 9ನೇ ತಾರೀಖಿನ ವರೆಗೆ, 9 ದಿನಗಳ ಕಾಲ, ‘ನಾನೂ ವಿಜ್ಞಾನಿ’ ಧ್ಯೇಯದ, ಟೆಲಿಸ್ಕೋಪ್ ರಚನಾ ಕಮ್ಮಟವನ್ನು, ದೊಡ್ಡಬಳ್ಳಾಪುರದ, ಬೆಸೆಂಟ್ ಪಾರ್ಕ್‌ನ, ಸ್ಕೌಟ್ಸ್ ಕ್ಯಾಂಪ್‌ನಲ್ಲಿ ಆಯೋಜಿಸಲಾಗಿದೆ.**

**ಈ ಕುರಿತು ಒಂದು ವರದಿ..**

***ಮಕ್ಕಳಲ್ಲಿ ವಿಜ್ಞಾನದ ಬಗ್ಗೆ ಆಸಕ್ತಿ, ವಿಜ್ಞಾನ ಕ್ಷೇತ್ರದ ಬಗ್ಗೆ ಮಹತ್ವಾಕಾಂಕ್ಷೆ ಹಾಗೂ, ವೈಜ್ಞಾನಿಕ ಮನೋಭಾವದೊಂದಿಗೆ, ಪ್ರಶ್ನಿಸುವ ಮನೋಭಾವವನ್ನು ಉದ್ದೀಪಿಸಿ, ನೋಡಿ ಕಲಿ, ಮಾಡಿ ತಿಳಿ ಮಾದರಿಯಲ್ಲಿ, ಆಯೋಜಿತವಾದ ವಿಶಿಷ್ಟ ಕಾರ್ಯಾಗಾರ, ‘ನಾನೂ ವಿಜ್ಞಾನಿ, ಟೆಲಿಸ್ಕೋಪ್ ತಯಾರಿಕೆ ಕಮ್ಮಟ.’ ಈ ಕಮ್ಮಟದಲ್ಲಿ, ರಾಜ್ಯದ 31 ಜಿಲ್ಲೆಗಳಿಂದ ಆಯ್ದ, 152 ವಿದ್ಯಾರ್ಥಿಗಳು, 60 ಜನ ಶಿಕ್ಷಕರು ಹಾಗೂ 10ಕ್ಕೂ ಹೆಚ್ಚು ತಜ್ಞ ವಿಜ್ಞಾನಿಗಳು ಭಾಗವಹಿಸಿದ್ದಾರೆ. ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್, ವರ್ಲ್ಡ್ ಬುಕ್ ಆಫ್ ರೆಕಾರ್ಡ್ಸ್ ಹಾಗೂ ಏಷ್ಯಾ ಬುಕ್ ಆಫ್ ರೆಕಾರ್ಡ್ಸ್ ಸಂಸ್ಥೆಗಳ ಪ್ರತಿನಿಧಿಗಳು,***

*ಶಿಬಿರವನ್ನು ವಿಶ್ವ ದಾಖಲೆಗಾಗಿ ಪರಿವೀಕ್ಷಿಸುತ್ತಿದ್ದಾರೆ. ಕಮ್ಮಟದ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತಿನ ಕಾರ್ಯಾಧ್ಯಕ್ಷ, ಪವಾಡ ಬಯಲು ಖ್ಯಾತಿಯ, ಹುಲಿಕಲ್ ನಟರಾಜ.*

<><><>

ವಿವೇಕ **(48)** + ಹುಲಿಕಲ್ ನಟರಾಜ ಧ್ವನಿ **(45)** ಸೆಕೆಂದುಗಳು

<><><>

ಕೆಮ್ಮು ನಿಯಂತ್ರಿಸುವ ಸಿರಪ್ ಬಳಕೆಯಿಂದ, ಮಕ್ಕಳ ಆರೋಗ್ಯದ ಮೇಲೆ ದುಷ್ಪರಿಣಾಮವಾಗುತ್ತಿದ್ದು, ಸರ್ಕಾರ ಅತ್ಯಂತ ಗಂಭೀರವಾಗಿ ಪರಿಗಣಿಸಿದೆ ಎಂದು, ಆರೋಗ್ಯ ಖಾತೆ ಸಚಿವ ದಿನೇಶ ಗುಂಡೂರಾವ, ಸ್ಪಷ್ಟ ಪಡಿಸಿದ್ದಾರೆ. ಬೆಂಗಳೂರಿನಲ್ಲಿ ಮಾತನಾಡಿದ ಸಚಿವರು, ರಾಜ್ಯದ ಔಷಧ ವ್ಯಾಪಾರಿಗಳು, ವೈದ್ಯರ ಸೂಚನೆ, ಸಲಹೆ ಅಥವಾ ಚೀಟಿ ಇಲ್ಲದೆ, ನೇರವಾಗಿ ಕೆಮ್ಮಿನ ಸಿರಪ್‌ಗಳನ್ನು ಮಾರಾಟ ಮಾಡದಂತೆ, ಸೂಚಿಸಲಾಗಿದೆ ಎಂದರು. ದೇಶದಲ್ಲೇ ಅತೀ ಹೆಚ್ಚು ಔಷಧಗಳನ್ನು ಉತ್ಪಾದಿಸುವ ರಾಜ್ಯ ಕರ್ನಾಟಕ. ಉತ್ಪಾದನಾ ಘಟಕಗಳ ತಪಾಸಣೆ ನಡೆಸುವ ಪ್ರಕ್ರಿಯೆಯನ್ನು, ಕರ್ನಾಟಕದಲ್ಲೇ ಮೊದಲು ಆರಂಭಿಸಲಾಯಿತು. ಇದೀಗ ಕೇಂದ್ರ ಸರ್ಕಾರ ಸಹ ಈ ಕ್ರಮವನ್ನು ಮುಂದುವರೆಸಿರುವುದು ಸ್ವಾಗತಾರ್ಹ, ಎಂದು ತಿಳಿಸಿದರು.

<><><>

ವೈದ್ಯರ ಸಲಹೆ–ಸೂಚನೆಗಳಿಲ್ಲದೆ, **4** ವರ್ಷದೊಳಗಿನ ಮಕ್ಕಳಿಗೆ,ಕೆಮ್ಮಿನ ಔಷಧವನ್ನು ನೀಡದಂತೆ, ಕೇಂದ್ರ ಆರೋಗ್ಯ ಇಲಾಖೆ ಸ್ಪಷ್ಟ ಸೂಚನೆ ನೀಡಿದೆ.

<><><>

'ವಚನ ವಿಶ್ವವಿದ್ಯಾಲಯ'ವನ್ನು, **2026** ರಲ್ಲಿ ಸ್ಥಾಪಿಸಲಾಗುವುದು ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ, ತಿಳಿಸಿದ್ದಾರೆ. 'ಬಸವಣ್ಣ ನಾಡಿನ ಸಾಂಸ್ಕೃತಿಕ ನಾಯಕ' ಎಂದು ಘೋಷಿಸಿ, ವರ್ಷ ಕಳೆದ ಹಿನ್ನೆಲೆ, ಬೆಂಗಳೂರಿನಲ್ಲಿ ಆಯೋಜಿಸಿದ್ದ, 'ಬಸವ ಸಂಸ್ಕೃತಿ ಅಭಿಯಾನ – **2025**'ರ, ಸಮಾರೋಪ ಸಮಾರಂಭದಲ್ಲಿ, ಅವರು ಮಾತನಾಡಿದರು. 'ನಮ್ಮ ಮೆಟ್ರೋ' ಕ್ಕೆ "ಬಸವ ಮೆಟ್ರೋ" ಎಂದು ನಾಮಕರಣ ಮಾಡುವಂತೆ, ಕೇಂದ್ರಕ್ಕೆ ಶಿಫಾರಸು ಮಾಡಲಾಗುವುದು ಎಂದರು.

<><><>

ಮುಖ್ಯಮಂತ್ರಿ ಸಿದ್ದರಾಮಯ್ಯ, ಇಂದು ಕೊಪ್ಪಳಕ್ಕೆ ಭೇಟಿ ನೀಡಿ, ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ, ಶಿಲಾನ್ಯಾಸ ನೆರವೇರಿಸಲಿದ್ದಾರೆ. ಇಂದು ಮಧ್ಯಾಹ್ನ **12** ಗಂಟೆಗೆ, ಕೊಪ್ಪಳ ವೈದ್ಯಕೀಯ ವಿಜ್ಞಾನ ಸಂಸ್ಥೆ – ಕಿಮ್ಸ್ ನ **450** ಹಾಸಿಗೆ ಸಾಮರ್ಥ್ಯದ, ನೂತನ ಆಸ್ಪತ್ರೆ ಕಟ್ಟಡ ಮತ್ತು ಧರ್ಮ ಶಾಲೆ ಕಟ್ಟಡ ಉದ್ಘಾಟಿಸಿ, ಸೂಪರ್ ಸ್ಪೆ ಾಲಿಟಿ ಆಸ್ಪತ್ರೆಯ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಮಧ್ಯಾಹ್ನ **1** ಗಂಟೆಗೆ, ಕೊಪ್ಪಳದ ಅಗಡಿ ಬಡಾವಣೆಯಲ್ಲಿ ಆಯೋಜಿತ, ಸಾರ್ವಜನಿಕ ಸಮಾರಂಭದಲ್ಲಿ, ಎರಡು ಸಾವಿರ ಕೋಟಿ ರೂಪಾಯಿ ಮೊತ್ತದ, ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಿದ್ದಾರೆ. ಫಲಾನುಭವಿಗಳಿಗೆ ವಿವಿಧ ಸವಲತ್ತುಗಳನ್ನು ವಿತರಿಸಲಿದ್ದಾರೆ.

<><><>

ಅಮೆರಿಕದ ಬಾಹ್ಯಾಕಾಶ ಕೇಂದ್ರ,ನಾಸಾಕ್ಕೆ ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಹಾಗೂ ವಿಧಾನ ಪರಿಷತ್ ಸಭಾಪತಿ, ಬಸವರಾಜ ಹೊರಟ್ಟಿ ಭೇಟಿ ನೀಡಿ, ವೀಕ್ಷಿಸಿದರು. ಅಮೆರಿಕದ ಬಾರ್ಬಡೋಸ್‌ನಲ್ಲಿ ಆಯೋಜಿತ, **68**ನೇ ಅಂತಾರಾಷ್ಟ್ರೀಯ ಕಾಮನ್‌ವೆಲ್ತ್ ಸ್ಪೀಕರ್ಸ್ ಕಾನ್ಫರೆನ್ಸ್‌ನಲ್ಲಿ ಅವರು, ಭಾಗವಹಿಸಲಿದ್ದಾರೆ. ಅಮೆರಿಕ ಅಧ್ಯಯನ ಪ್ರವಾಸದ ಭಾಗವಾಗಿ ಅವರು, ವಿವಿಧ ಪ್ರದೇಶಗಳಿಗೆ ಭೇಟಿ ನೀಡಲಿದ್ದಾರೆ.

<><><>

ಈಗ ವಾಣಿಜ್ಯ ಪ್ರಕಟಣೆ,
ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..
**(31 ಸೆಕೆಂದುಗಳು)**

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ **X** ಖಾತೆ **@airnews_Kannada** ಹಾಗೂ

ನಮ್ಮ ಫೇಸ್ಬುಕ್ ಖಾತೆ **Akashvani RNU Bengaluru-Dharwad** ಅನುಸರಿಸಿ.

<><><>

ತ್ಯಾಗ, ಸತ್ಯ ಮತ್ತು ಅಹಿಂಸೆಯ, ಶಾಶ್ವತ ಸಂಕೇತ, ಭಗವಾನ್ ಮಹಾವೀರರು, ತಮ್ಮ ಬೋಧನೆಗಳ ಮೂಲಕ, ಇಡೀ ಮಾನವ ಜನಾಂಗದ ಕಲ್ಯಾಣಕ್ಕೆ, ದಾರಿ ದೀಪವಾಗಿದ್ದಾರೆ ಎಂದು ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಹೇಳಿದ್ದಾರೆ. ಬೆಂಗಳೂರಿನಲ್ಲಿ ಆಯೋಜಿಸಲಾಗಿದ್ದ, ಪ್ರಜ್ಞಾ ಜೈನ ಸಂಘದ, ಸನ್ಮಾನ ಸಮಾರಂಭದಲ್ಲಿ ಭಾಗವಹಿಸಿ, ಅವರು ಮಾತನಾಡಿದರು. ಜೈನ ಧರ್ಮ, ಕೇವಲ ಒಂದು ಪಂಥವಲ್ಲ; ಬದಲಾಗಿ ಅದು ನಡವಳಿಕೆ. ಸೇವೆಯನ್ನು ಸರ್ವೋಚ್ಚ ಧರ್ಮವೆಂದು ಪರಿಗಣಿಸಿ, ಪ್ರಜ್ಞಾ ಜೈನ ಸಂಘ, ತನ್ನ ಎಲ್ಲ ಕಾರ್ಯಗಳನ್ನು ಸಾಕಾರಗೊಳಿಸುತ್ತ, ಮುನ್ನಡೆದಿದೆ ಎಂದು, ಶ್ಲಾಘಿಸಿದರು. ಪಂಜಾಬ್ ರಾಜ್ಯಪಾಲ ಗುಲಾಬ್‌ಚಂದ್ ಕಟಾರಿಯಾ, ಶ್ರೀ ನಾನಕ್ ಶ್ರಾವಕ ಸಮಿತಿ ಅಧ್ಯಕ್ಷ ಸಂಪತ್ ಚಾಪ್ಲೋಟ್ ಪಾಲ್ಗೊಂಡಿದ್ದರು.

<><><>

'ಸ್ವಚ್ಛ ಭಾರತ, ಸ್ವಸ್ಥ ಭಾರತ' ಧ್ಯೇಯದೊಂದಿಗೆ, ಈ ತಿಂಗಳ 31ರ ವರೆಗೆ, 'ಫಿಟ್ ಇಂಡಿಯಾ ಸ್ವಚ್ಛತಾ ಫ್ರೀಡಂ ರನ್' ಆಯೋಜಿತವಾಗಿದೆ. ಅಕ್ಟೋಬರ್ ತಿಂಗಳ ಪ್ರಥಮ ಭಾನುವಾರವಾದ ನಿನ್ನೆ, 'ಸಂಡೇಸ್ ಆನ್ ಬೈಸಿಕಲ್ಸ್' ಅಭಿಯಾನದಡಿ, ಸೈಕ್ಲಿಸ್ಟ್‌ಗಳು, ಕೊಪ್ಪಳ, ಉತ್ತರಕನ್ನಡ, ಚಿಕ್ಕಮಗಳೂರು ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಸಂಚರಿಸಿ, ಜನ ಸಾಮಾನ್ಯರಲ್ಲಿ ಪರಿಸರ ಪ್ರಜ್ಞೆ, ಇಂಗಾಲದ ಹೆಜ್ಜೆ ಗುರುತು ನಿಯಂತ್ರಿಸಲು, ಪರಿಸರ ಸ್ನೇಹಿ, ಮಾನವ ಶ್ರಮದ ಅಥವಾ ವಿದ್ಯುನ್ಮಾನ ಮತ್ತು ಸೌರ ಚಾಲಿತ ವಾಹನಗಳ ಬಳಕೆಗೆ ಒತ್ತು ನೀಡುವಂತೆ, ಕೋರಿದರು.

<><><>

ದಶಮಾನೋತ್ಸವ ಸಂಭ್ರಮದಲ್ಲಿರುವ, ಹುಬ್ಬಳ್ಳಿ ಬೈಸಿಕಲ್ ಕ್ಲಬ್ ಸದಸ್ಯರು, ಪ್ರತಿ ವಾರ, 25 ಕಿಲೋ ಮೀಟರ್ ಸೈಕ್ಲಿಂಗ್ ಪರಿಪಾಠ ಹೊಂದಿದ್ದಾರೆ. ಫಿಟ್ ಇಂಡಿಯಾ ಅಭಿಯಾನದ ಹಿನ್ನೆಲೆ, ಸಕ್ಷಮ ನಗರಿ, ಹುಬ್ಬಳ್ಳಿ ಧಾರವಾಡದಲ್ಲಿ, ಪ್ರತ್ಯೇಕ ಸೈಕ್ಲಿಂಗ್ ಟ್ರ್ಯಾಕ್ ನಿರ್ಮಿಸುವಂತೆ, ಕ್ಲಬ್ ಪದಾಧಿಕಾರಿಗಳು ಜಿಲ್ಲಾಡಳಿತಕ್ಕೆ ಮನವಿ ಮಾಡಿದ್ದಾರೆ.

ಪ್ರದೇಶ ಸಮಾಚಾರಕ್ಕಾಗಿ, ಹುಬ್ಬಳ್ಳಿ ಬೈಸಿಕಲ್ ಕ್ಲಬ್ ಕಾರ್ಯದರ್ಶಿ, ಶಿವಾನಂದ ದಂಡಾವತಿಮಠ..

<><><>

ಶಿವಾನಂದ ದಂಡಾವತಿಮಠ ಧ್ವನಿ (43) ಸೆಕೆಂದುಗಳು

<><><>

ಸರಕು ಮತ್ತು ಸೇವಾ ತೆರಿಗೆ – 'ನೆಕ್ಸ್ಟ್ ಜೆನ್ ಜಿ.ಎಸ್.ಟಿ.' 2ನೇ ಆವೃತ್ತಿ ಪರಿಷ್ಕರಣೆಯಿಂದ, ಸಕ್ಕರೆ ಹಾಗೂ ಸಂಬಂಧಿತ ಉತ್ಪನ್ನಗಳ ಮೇಲಿನ, ಶೇಕಡ 6 ರಿಂದ 7ರಷ್ಟು ತೆರಿಗೆ ಕಡಿತ, 50 ಲಕ್ಷ ಕಬ್ಬು ಬೆಳೆಗಾರರಿಗೆ ಹಾಗೂ 2 ಲಕ್ಷ ಕಾರ್ಮಿಕರಿಗೆ ಲಾಭ ಒದಗಿಸಲಿದೆ. ಶೀತಲೀಕರಿಸಿದ ಮೀನು ಹಾಗೂ ಖಾದ್ಯಗಳ ಮೇಲೆ, ಶೇಕಡ 5 ರಷ್ಟು ಜಿ.ಎಸ್.ಟಿ. ಕಡಿತದಿಂದ, 2 ಲಕ್ಷ ಮೀನುಗಾರರಿಗೆ ನೇರ ಲಾಭ ಸಿಗಲಿದೆ. ವಸ್ತ್ರೋದ್ಯಮ, ಚರ್ಮೋದ್ಯಮ, ಪೈಠಾಣಿ ಹಾಗೂ ವರ್ಲಿ ಕಲೆಗಳಿಗೆ, ಜಿ.ಎಸ್.ಟಿ. ಇಳಿಕೆಯಿಂದ, 11 ಲಕ್ಷ ಕಾರ್ಮಿಕರು ಹಾಗೂ ಕರಕುಶಲ ಕಲೆಗಾರರಿಗೆ ಲಾಭವಾಗಲಿದೆ.

<><><>

ಇಂದು, ವಿಶ್ವ ಸೆರೆಬ್ರಲ್ ಪಾಲ್ಸಿ ದಿನ. ಅನನ್ಯ ಮತ್ತು ಸಂಘಟಿತ, #UniqueAndUnited ಧ್ಯೇಯದೊಂದಿಗೆ, ನರ ಮಂಡಲ ಹಾಗೂ ಮೆದುಳಿನ ಅಪೂರ್ಣ ಬೆಳವಣಿಗೆ ಸಮಸ್ಯೆ ಎದುರಿಸುತ್ತಿರುವವರ ಬಗ್ಗೆ, ಕಾಳಜಿ ಹಾಗೂ ಸೆರೆಬ್ರಲ್ ಪಾಲ್ಸಿ ರೋಗದ ಬಗ್ಗೆ, ಜನ ಜಾಗೃತಿ ಮೂಡಿಸುವ, ಸಾಮುದಾಯಿಕ ಸಹಕಾರವನ್ನು ಸಂಘಟಿಸುವ, ದಿನಾಚರಣೆ.

<><><>

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಸ್ಥಾಪನೆಗೊಂಡು, 50 ವರ್ಷಗಳು ಪೂರ್ಣಗೊಂಡ ಹಿನ್ನೆಲೆ, ಸುವರ್ಣ ಮಹೋತ್ಸವ ಸಂಭ್ರಮಾಚರಣೆಯಲ್ಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ಇಂದು ಬೆಳಗ್ಗೆ 10 ಗಂಟೆಗೆ, ಬೆಂಗಳೂರಿನ ವಿಧಾನಸೌಧದ ಪೂರ್ವ ದ್ವಾರದ ಮೆಟ್ಟಿಲುಗಳ ಬಳಿ, ಸುವರ್ಣ ಮಹೋತ್ಸವ ಲಾಂಛನವನ್ನು ಬಿಡುಗಡೆ ಮಾಡಲಿದ್ದಾರೆ. ಪರಿಸರ ಖಾತೆ ಸಚಿವ ಈಶ್ವರ ಖಂಡ್ರೆ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ನರೇಂದ್ರ ಸ್ವಾಮಿ ಪಾಲ್ಗೊಳ್ಳಲಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- 'ನಾನೂ ವಿಜ್ಞಾನಿ' ಟೆಲಿಸ್ಕೋಪ್ ರಚನಾ ಕಮ್ಮಟ; ದೊಡ್ಡಬಳ್ಳಾಪುರದಲ್ಲಿ, 6ನೇ ದಿನಕ್ಕೆ ಪಾದಾರ್ಪಣೆ.
- ವೈದ್ಯರ ಸಲಹೆ ಪಡೆಯದೇ, 4 ವರ್ಷದೊಳಗಿನ ಮಕ್ಕಳಿಗೆ,ಕೆಮ್ಮಿನ ಔಷಧಿ ನೀಡದಂತೆ, ಆರೋಗ್ಯ ಇಲಾಖೆ, ಸ್ಪಷ್ಟ ಸೂಚನೆ.
- ತ್ಯಾಗ, ಸತ್ಯ ಮತ್ತು ಅಹಿಂಸೆಯ, ಶಾಶ್ವತ ಸಂಕೇತ, ಭಗವಾನ್ ಮಹಾವೀರರು – ರಾಜ್ಯಪಾಲರ, ಅಭಿಮತ.
- 'ಫಿಟ್ ಇಂಡಿಯಾ ಸ್ವಚ್ಛತಾ ಫ್ರೀಡಂ ರನ್'; 'ಸಂಡೇಸ್ ಆನ್ ಬೈಸಿಕಲ್ಸ್' ಅಭಿಯಾನ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>